# ಕಾರುಗಳ ಹುಚ್ಚ!

**60ರ ಹರೆಯದ ಜೇನ್ ಲೆನೋಗೆ ಬೈಸಿಕಲ್, ಬೈಕ್, ಕಾರುಗಳ ಹುಚ್ಚು! ಈತ ನೂರು ಕಾರುಗಳ ಒಡೆಯ!**

■ ಸುಮಲತಾ






'ಚಿಕ್ಕಂದಿನಿಂದಲೂ ನನಗೆ ಕಾರುಗಳನ್ನು ಕಂಡರೆ ಇಷ್ಟ. ರಸ್ತೆಗಳ ಮೇಲೆ ರುಂಯ್.. ಎಂದು ಕಾರುಗಳು ಓಡಾಡುತ್ತಿದ್ದರೆ ನಾನು ಹಾಗೆಯೇ ನಿಂತು ನೋಡುತ್ತಿದ್ದೆ. ಹೈಸ್ಕೂಲ್ ಮೆಟ್ಟಿಲೇರಿದಾಗಲೇ ನನಗೆ ಮೊದಲ ಬಾರಿಗೆ ಕಾರು ಓಡಿಸುವ ಅವಕಾಶ ಸಿಕ್ಕಿತು. ಅಲ್ಲಿಂದೀಚೆಗೆ ಕಾರುಗಳ ಆಕರ್ಷಣೆ ಏರುತ್ತಲೇ ಹೋಯಿತು" ಎನ್ನುತ್ತಾನೆ ಜೇನ್ ಲೆನೋ.

ಅಮೆರಿಕನ್ ಜೇನ್ ಲೆನೋ ವಾಸವಾಗಿರುವುದು ಕ್ಯಾಲಿಫೋರ್ನಿಯಾದಲ್ಲಿ. ಆತನಿಗೀಗ 60ರ ಹರೆಯ. ಕಣ್ಣಿಗೆ ಚಂದ ಕಂಡ ಕಾರು, ಬೈಕ್‌ಗಳನ್ನೆಲ್ಲ ಖರೀದಿಸುವುದು ಈತನ ಹವ್ಯಾಸ. ಈತನ ಬಳಿ ಇರುವ ಕಾರುಗಳ ಸಂಖ್ಯೆ ನೂರು ದಾಟಿದೆ! ವೃತ್ತಿಯಲ್ಲಿ ಈತ ಕಾಮೆಡಿಯನ್. ಅಮೆರಿಕದ ಟಿವಿಗಳಲ್ಲಿ 'ಜಾನಿ ಕಾರ್ಸನ್', 'ಟು ನೈಟ್ ಷೋ' ಮುಂತಾದ ಕಾರ್ಯಕ್ರಮಗಳ ಮೂಲಕ ಜನಪ್ರಿಯನಾದವನು. ವೃತ್ತಿ ಬೇಸರ ಅನ್ನಿಸಿದಾಗಲೆಲ್ಲ ಈ ತಾತನದ್ದು ಕಾರುಗಳ ಒಡನಾಟ. ತಮ್ಮ ಕಾರುಗಳನ್ನು ನೋಡಿಕೊಳ್ಳಲು ಈತ ಸ್ವಂತದ್ದೊಂದು ಗ್ಯಾರೇಜ್ ಕೂಡಾ ಮಾಡಿದ್ದಾರೆ. ಅದರ ಹೆಸರು– ಜೇನ್ ಲೆನೋ ಗ್ಯಾರೇಜ್.

ಕ್ಯಾಲಿಫೋರ್ನಿಯಾದ ಬರ್ಬ್ಯಾಂಕ್‌ನಲ್ಲಿರುವ ಈ ಗ್ಯಾರೇಜ್‌ನ ವಿಸ್ತೀರ್ಣ 17,000 ಚದರ ಅಡಿ. ಬರೋಬ್ಬರಿ 100 ಬಗೆಯ ಕಾರುಗಳು, 90 ಬಗೆಯ ಮೋಟಾರು ಬೈಕ್‌ಗಳು ಈ ಗ್ಯಾರೇಜ್‌ನಲ್ಲಿವೆ. ಹಳೇ ಕಾಲದ ವಿಂಟೇಜ್ ಕಾರುಗಳಿಂದ ಆರಂಭಿಸಿ ಹೊಚ್ಚ ಹೊಸ ನ್ಯಾನೊ ಕಾರು ಕೂಡಾ ಈ ಗ್ಯಾರೇಜಿನಲ್ಲಿದೆ. ತಮ್ಮ ಕಾರುಗಳಿಗೆಂದೇ ಪ್ರತ್ಯೇಕ ಮೆಕಾನಿಕ್‌ಗಳನ್ನೂ ಈತ ನಿಯೋಜಿಸಿದ್ದಾರೆ. ಮೆಶಿನ್ ಶಾಪ್, ತಮ್ಮದೇ ಆದ ಬಿಡಿಭಾಗಗಳ ಸಂಗ್ರಹವೂ ಇದೆ. ಈ ಗ್ಯಾರೇಜಿನ ಚಾವಣಿಗೆ ಸೋಲಾರ್ ಪ್ಯಾನೆಲ್‌ಗಳನ್ನೂ ಅಳವಡಿಸಿದ್ದು, ಗ್ಯಾರೇಜ್ ಒಳಗಿರುವ ಕಾರುಗಳ ನಿರ್ವಹಣೆ ಸುಲಭವಾಗಿದೆ. ಗ್ಯಾರೇಜ್‌ಗೆ ಭೇಟಿ ನೀಡಿದವರ ಹೊಟ್ಟೆ ತುಂಬಿಸಲು ಅಲ್ಲೇ ಅಡುಗೆ ಮನೆಯೂ ಇದೆ. ಯಾಕೆಂದರೆ ಜೇನ್ ಒಬ್ಬ ಒಳ್ಳೆಯ ಬಾಣಸಿಗನೂ ಹೌದು!

ಲೆನೋ ಬಳಸಿದ ಮೊದಲ ಕಾರು 1955ರ ಬ್ಯೂಕ್ ರೋಡ್‌ಸ್ಟರ್. ಎಲೆಕ್ಟ್ರಿಕ್, ಸ್ಟೀಮ್, ಹೈಬ್ರಿಡ್, ಸ್ಪೋರ್ಟ್ಸ್, ಪರ್ಫಾರ್ಮೆನ್ಸ್ ಕಾರುಗಳು, ಜೆಟ್ ಕಾರು, ಕಾನ್ಸೆಪ್ಟ್ ಕಾರು, ಮಸಲ್ ಕಾರು, ಸೋಲಾರ್ ಕಾರು– ಹೀಗೆ ಈತನ ಗ್ಯಾರೇಜ್‌ನಲ್ಲಿ ವಿವಿಧ ವಿಭಾಗಗಳಿವೆ. ಬುಗಾಟಿ, ಕ್ರಿಸ್ಲರ್ ಗ್ಯಾಸ್ ಟರ್ಬೈನ್ ಕಾರು, 1966ರ ಟೊಯೊಟೊ, ಡೋಬಲ್ ಸೀರೀಸ್ ಸ್ಟೀಮ್ ಕಾರುಗಳು, ಬೇಕರ್ ಎಲೆಕ್ಟ್ರಿಕ್, ಶಾಟ್‌ವೆಲ್ ತ್ರೀ ವೀಲರ್, 1951ರ ಹಡ್ಸನ್ ಹಾರ್ನೆಟ್, ಫೋರ್ಡ್ ಗ್ಯಾಲಕ್ಸಿ, ಬ್ಯೂಕ್, ಕಾರ್ಡ್, ಸೆಡಾನ್, ಡೋಬಲ್, ಫೆರಾರಿ, ಎಂಸಿ ಲಾರೆನ್– ಹೀಗೆ ಬಹುತೇಕ ಎಲ್ಲ ಕಂಪೆನಿಗಳ ಕಾರುಗಳೂ ಇಲ್ಲಿವೆ. ಇಳಿವಯಸ್ಸಿನಲ್ಲೂ ಖರೀದಿಯ ಹುಚ್ಚು ಬಿಟ್ಟಿಲ್ಲ. ಲೆಕ್ಸಸ್ ಎಲ್‌ಎಫ್‌ಎ ಸ್ಪೈಡರ್, 2013 ಮಸ್ಟಾಂಗ್ ಬಾಸ್, ಟಾಟಾ ನ್ಯಾನೊ ಅವರ ಸಂಗ್ರಹಕ್ಕೆ ಇತ್ತೀಚಿನ ಸೇರ್ಪಡೆ.

ಕಾರುಗಳ ಜತೆಗೆ ವಿನ್ಸೆಂಟ್ ಬ್ಲ್ಯಾಕ್ ಶಾಡೊ ಬೈಕ್, ಹಾರ್ಲೆ ಡೇವಿಡ್ಸನ್, ಹೋಂಡಾ, ವಿನ್ಸೆಂಟ್, ರಾಯಲ್ ಎನ್‌ಫೀಲ್ಡ್ ಹೀಗೆ 90 ಬಗೆಯ ಮೋಟಾರು ಬೈಕ್‌ಗಳೂ ಸಂಗ್ರಹದಲ್ಲಿವೆ.

'ಪಾಪುಲರ್ ಮೆಕಾನಿಕ್ಸ್' ಮ್ಯಾಗಸಿನ್‌ನಲ್ಲಿ ಲೆನೋ ತಮ್ಮ ಕಾರುಗಳ ಸಂಗ್ರಹವನ್ನು ತೆರೆದಿಟ್ಟಿದ್ದಾರೆ. www.jalelenosgarage.comಗೆ ಭೇಟಿ ಕೊಟ್ಟರೆ, ಅವರ ಅಪರೂಪದ ಕಾರುಗಳ ಸಂಗ್ರಹವನ್ನು ಕಣ್ತುಂಬಿಕೊಳ್ಳಬಹುದು.

ಭಾರತದ ನ್ಯಾನೋ ಕಾರಿನ ಬಗ್ಗೆ ಲೆನೋ ಸಾಕಷ್ಟು ಮೆಚ್ಚುಗೆ ವ್ಯಕ್ತಪಡಿಸುತ್ತಾರೆ. 'ಬಿಳಿಯ ಬಣ್ಣದಲ್ಲಿ ಭಾರತದ ಬಾವುಟದ ಬಣ್ಣವನ್ನು ತಿಳಿಯಾಗಿ ಹೊಂದಿರುವ ಪುಟ್ಟ ನ್ಯಾನೊ ನನ್ನನ್ನು ಇಂಪ್ರೆಸ್ ಮಾಡಿದೆ. ಇದು ನಗರಕ್ಕೆ ಹೇಳಿ ಮಾಡಿಸಿದ ವಾಹನ. ಅತಿ ಕಡಿಮೆ ಬೆಲೆಗೆ ಇಷ್ಟು ಒಳ್ಳೆಯ ಕಾರು ಸಿಗುತ್ತದೆಯೆ?!' ಎಂದು ಅವರು ಅಚ್ಚರಿ ವ್ಯಕ್ತಪಡಿಸುತ್ತಾರೆ.

'ಪ್ರತಿ ಸಲವೂ ಬೇರೆ ಬೇರೆ ಕಾರಿನಲ್ಲಿ ದೂರ ಪ್ರಯಾಣ ಕೈಗೊಳ್ಳುತ್ತೇನೆ. ಕಷ್ಟ ಬಂದರೆ ಮನೆಯನ್ನು ಮಾರುತ್ತೇನೆಯೇ ಹೊರತು ಕಾರನ್ನು ಮಾರುವುದಿಲ್ಲ' ಎಂದು ಈತ ತನ್ನ ಕಾರಿನ ಹುಚ್ಚನ್ನು ವ್ಯಕ್ತಪಡಿಸುತ್ತಾನೆ!